ಪೊಲೀಸ್ ಟ್ರೈನಿಂಗ್ ಶಾಲೆಗೆ ನಿವೇಶನ ಮಂಜೂರಾತಿ
ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ)
98 : (167)

ಅ) ಹಾಸನ ಜಿಲ್ಲೆಯ ಹಾಸನದಲ್ಲಿ ಪೊಲೀಸ್ ಟ್ರೈನಿಂಗ್ ಶಾಲೆಯನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರ ಅನುದಾನ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪೊಲೀಸ್ ಟ್ರೈನಿಂಗ್ ಶಾಲೆಗೆ ಅವಶ್ಯಕತೆಯಿರುವ ಜಮೀನನ್ನು ಕಂದಾಯ ಇಲಾಖೆ ಇದುವರೆವಿಗೂ ಮಂಜೂರು ಮಾಡದಿರಲು ಕಾರಣವೇನು (ಮಾಹಿತಿ ಒದಗಿಸುವುದು)?

ಶ್ರೀ ಆರ್.ಅಶೋಕ್ (ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪೊಲೀಸ್ ತರಬೇತಿ ಶಾಲೆಗೆ ಅವಶ್ಯಕತೆ ಇರುವ 50 ಎಕರೆ ಜಮೀನನ್ನು ಹಾಸನ ತಾಲ್ಲೂಕು, ಶಾಂತಿಗ್ರಾಮ ಹೋಬಳಿ, ಶಾಂತಿಗ್ರಾಮದ ಸರ್ವೆ ನಂಬರ್ 510ರಲ್ಲಿ ಕಂದಾಯ ಇಲಾಖೆಯು ಮಂಜೂರು ಮಾಡಿ ಆದೇಶ ಸಂಖ್ಯೆ:ಆರ್‌ಡಿ 5 ಎಲ್‌ಜಿಹೆಚ್ 2013 ದಿನಾಂಕ:30/01/2013ರಂದು ಸರ್ಕಾರದ ಆದೇಶವನ್ನು ಹೊರಡಿಸಿದೆ.

ರಾಜೀವ್ ಗಾಂಧಿ ವಿ.ವಿ.ಸ್ಥಾಪನೆ
ಶ್ರೀ ರಾಜು.ಕೆ.(ರಾಮನಗರ)
94 (174)

ಅ) ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯವನ್ನು ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಪ್ರಾರಂಭ ಮಾಡಿ 5 ವರ್ಷಗಳೇ ಕಳೆದರೂ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು;

ಆ) ಇದನ್ನು ಪ್ರಾರಂಭ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?